ಓ ಎಸ್ ನಂಃ 200-17
ಪಿ ಡಬ್ಲ್ಯೂ ಃ 1

**ದಿಃ 19-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ ಎಸ್ ಎನ್ ವಕೀಲರಿಂದ**

34. ಈ ದಾವೆಯ ಮೊದಲು ಓ ಎಸ್ ನಂ 494/2014 ರ ದಾವಾ ಆಸ್ತಿಯ ನಂ.62/1 ಎ ಇರುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ 9 3/4 ಗುಂಟೆ ಇರುತ್ತದೆ. ಆ ಆಸ್ತಿಯ ಪೂರ್ವಕ್ಕೆ ರಂಗಪ್ಪರವರ ಆಸ್ತಿ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸೈಯದ್ ಇಬ್ರಾಹಿಂ ರವರ ಆಸ್ತಿ, ದಕ್ಷಿಣಕ್ಕೆ ರಸೂಲ್ ಸಾಹೇಬ್ ರವರ ಆಸ್ತಿ. ದಕ್ಷಿಣಕ್ಕೆ ಇರುವ ರಸೂಲ್ ಸಾಹೇಬ್ ರವರ ಆಸ್ತಿ ಅವರಿಗೆ ದಿನಾಂಕಃ 18-06-1969 ರ ವಿಭಾಗ ಪತ್ರದ ಮೂಲಕ ಬಂದಿರುವ ಆಸ್ತಿ ಎಂದರೆ ನಿಜ. ಮೇಲೆ ಹೇಳಿದ ಚಕ್ಕುಬಂದಿಯ ಜಮೀನಿನ ಮಾಲೀಕರು ಮಹಮ್ಮದ್ ಲಿಯಾಕತ್ ಎಂದರೆ ನಿಜ. ಮೇಲೆ ಹೇಳಿದ ಆಸ್ತಿಯ ಮೇಲೆ ನಾನು ಕ್ರಯದ ಕರಾರು ಪತ್ರದ ಬಗ್ಗೆ ಮಹಮದ್ ಲಿಯಾಕತ್ ರವರ ವಿರುದ್ದ ಒಂದು ದಾವೆಯನ್ನು ಹೂಡಿದ್ದೆ ಎಂದರೆ ನಿಜ. ಆ ದಾವೆಯಲ್ಲಿ ನಾನು ಮಹಮದ್ ಅಮೀನ್ ಖಾನ್‌ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದೆ ಎಂದರೆ ನಿಜ. ನಾನು ಆ ದಾವೆಯಲ್ಲಿ ಈ ದಾವೆಯ 1 ರಿಂದ 3 ನೇ ಪ್ರತಿವಾದಿಗಳನ್ನು ಆ ದಾವೆಯಲ್ಲಿಯೂ ಸಹ 1 ರಿಂದ 3 ನೇ ಪ್ರತಿವಾದಿಗಳನ್ನಾಗಿ ಪಕ್ಷಗಾರರನ್ನಾಗಿ ಮಾಡಿದ್ದೆ ಎಂದರೆ ನಿಜ. ಸದರಿ ದಾವೆಯಲ್ಲಿ ನಾನು 3 ನೇ ಪ್ರತಿವಾದಿ ಮಾತ್ರ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಇಬ್ಬರು ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಓ ಎಸ್ ನಂ 494/2014 ರಲ್ಲಿ ಇಬ್ಬರು ಪ್ರತಿವಾದಿಗಳು ನನಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ 3 ಲಕ್ಷ ರೂಗಳನ್ನು 3 ನೇ ಪ್ರತಿವಾದಿಗೆ ಕೊಟ್ಟಿರುವ ಬಗ್ಗೆ ನಮೂದು ಇದೆ ಎಂದರೆ ಅದು ಸರಿಯಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು 1 ಮತ್ತು 3 ನೇ ಪ್ರತಿವಾದಿ ಇಬ್ಬರಿಗೂ ಕೊಟ್ಟರುತ್ತೇನೆ ಎಂದು ಹೇಳುತ್ತಾರೆ. ಓ ಎಸ್ ನಂ 494/2014 ರಲ್ಲಿಕ್ರಯದ ಕರಾರು ಪತ್ರವನ್ನು 3 ನೇ ಪ್ರತಿವಾದಿ ಮಾತ್ರ ಸಹಿ ಮಾಡಿಕೊಟ್ಟಿರುವುದಾಗಿ ಹೇಳಿದ್ದು 1 ನೇ ಪ್ರತಿವಾದಿ ಸಹಿ ಮಾಡಿರುವ ಬಗ್ಗೆ ನಾನು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕಃ 18-12-2007 ರಂದು 1 ಲಕ್ಷ ರೂಗಳ ಚೆಕ್ಕನ್ನು 1 ನೇ ಪ್ರತಿವಾದಿಯ ಹೆಸರಿಗೆ ಬರೆದುಕೊಟ್ಟಿರುತ್ತೇನೆ. 1 ನೇ ಪ್ರತಿವಾದಿಗೆ ಚೆಕ್ಕನ್ನು ಕೊಟ್ಟಿರುವ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಓ ಎಸ್ ನಂ 494/2014 ರ ವಾದ ಪತ್ರದಲ್ಲಿ ನಾನು ದಿನಾಂಕಃ 18-12-2007 ರಂದು 1 ಲಕ್ಷ ರೂವನ್ನು 3 ನೇ ಪ್ರತಿವಾದಿಗೆ

ಕೊಟ್ಟಿರುತ್ತೇನೆಂದು ಹೇಳಿರುತ್ತೇನೆ ಎಂದರೆ ಇಬ್ಬರಿಗೂ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ದಿನಾಂಕಃ **18-12-2007** ರಂದು ಕೊಟ್ಟ ಚೆಕ್ಕಿನ ಬಗ್ಗೆ **3** ನೇ ಪ್ರತಿವಾದಿ ಕಾಗದದ ಹಿಂದುಗಡೆ ಒಂದು ಷರಾವನ್ನು ಬರೆದುಕೊಟ್ಟಿರುತ್ತಾರೆಂದು ನಾನು ಹೇಳಿರುತ್ತೇನೆ ಎಂದರೆ ನೆನಪಿಲ್ಲ. ಓ ಎಸ್ ನಂ **494/2014** ರ ವಾದ ಪತ್ರದಲ್ಲಿ ದಿನಾಂಕಃ **07-01-2008** ರಂದು **3** ನೇಪ್ರತಿವಾದಿ ಒಂದು ಷರಾವನ್ನು ಬರೆದುಕೊಟ್ಟಿರುತ್ತಾರೆಂದು ನಾನು ಹೇಳಿರುತ್ತೇನೆ ಎಂದರೆ ನಿಜ. ದಿನಾಂಕಃ **23-09-2010** ರಂದು **60** ಸಾವಿರರೂಗಳನ್ನು ಪಡೆದು **3** ನೇ ಪ್ರತಿವಾದಿ ನನಗೆ ಷರಾ ಬರೆದುಕೊಟ್ಟಿರುತ್ತಾರೆಂದು ಹೇಳಿರುತ್ತೇನೆ ಎಂದರೆ ನಿಜ. ಅದೇ ರೀತಿ ನನ್ನಿಂದ **3** ನೇ ಪ್ರತಿವಾದಿ **5** ಲಕ್ಷ **60** ಸಾವಿರ ರೂಗಳನ್ನುಪಡೆದಿರುತ್ತಾರೆಂದು ನನ್ನ ವಾದಪತ್ರದಲ್ಲಿ ಹೇಳಿದ್ದೆ ಎಂದರೆ ನಿಜ. ನಾನು **3** ನೇ ಪ್ರತಿವಾದಿಯಿಂದ ಪಡೆದ ಕ್ರಯದ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆ ಈ ದಾವೆಯಲ್ಲಿ ನಿಶಾನೆಯಾಗಿ ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**